# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–5


ಸಂ : ದೈ.ಶಿ.ವಿ./ 121 /2018–2019 ದಿನಾಂಕ : 02-06-2018


E.mail-dir.deptofphyedn@gmail.com
Ph. No. 0821-2419288


ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ
ಹಾಗೂ ನಿಯೋಜಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಮಾನ್ಯರೆ,

ವಿಷಯ : 2018–2019ನೇ ಸಾಲಿನ ಕ್ರೀಡಾ ಕಾರ್ಯಕ್ರಮಗಳನ್ನು ಯೋಜಿಸಲು ಪ್ರತಿನಿಧಿಗಳ ಸಭೆ ನಡೆಸುವ ಬಗ್ಗೆ.

* * * * * *

ಮೈಸೂರು ವಿಶ್ವವಿದ್ಯಾನಿಲಯದ 2018–2019ನೇ ಸಾಲಿನ ಕ್ರೀಡಾ ಕಾರ್ಯಕ್ರಮಗಳನ್ನು ರೂಪಿಸಲು ದಿನಾಂಕ 20ನೇ ಜೂನ್ 2018ರಂದು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ಇಲ್ಲಿ ಬೆಳಗ್ಗೆ 10–30 ಕ್ಕೆ ಏರ್ಪಡಿಸಲಾಗಿದೆ. ಸಂಯೋಜಿತ ಹಾಗೂ ನಿಯೋಜಕ ಕಾಲೇಜುಗಳ ಪ್ರತಿನಿಧಿಗಳ ವಾರ್ಷಿಕ ಸಭೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಟಿ.ಕೆ. ಉಮೇಶ್‌ರವರು ಉದ್ಘಾಟಿಸಲಿದ್ದು, ವಿಭಾಗದ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಲಿದೆ. ಸದರಿ ಸಭೆಯಲ್ಲಿ ಪಾಲ್ಗೊಳ್ಳುವಂತೆ ತಮ್ಮ ಕಾಲೇಜಿನ ಪ್ರತಿನಿಧಿ (ದೈಹಿಕ ಶಿಕ್ಷಣ ಶಿಕ್ಷಕ : ಕ್ರೀಡಾ ಕಾರ್ಯದರ್ಶಿ) ಯವರಿಗೆ ನಿರ್ದೇಶನ ನೀಡಬೇಕೆಂದು ಕೋರುತ್ತೇನೆ. ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯಗಳಿಗೆ ತಮ್ಮ ಒಪ್ಪಿಗೆಯನ್ನು ಸ್ಥಳದಲ್ಲಿಯೇ ಸೂಚಿಸುವ ಹೊಣೆಗಾರಿಕೆಯನ್ನು ತಮ್ಮ ಪ್ರತಿನಿಧಿಗಳಿಗೆ ನೀಡಬೇಕೆಂದು ವಿನಂತಿಸುತ್ತೇನೆ. ಸಭೆಗೆ ಹಾಜರಾಗುವ ಪ್ರತಿನಿಧಿಗಳ ಪ್ರಯಾಣ ಹಾಗೂ ದಿನಭತ್ಯೆಗಳನ್ನು ಆಯಾ ಕಾಲೇಜಿನ ಕ್ರೀಡಾ ನಿಧಿಯಿಂದಲೇ ಭರಿಸತಕ್ಕದ್ದು.

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಪ್ರತಿನಿಧಿಗಳನ್ನು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ಇಲ್ಲಿ ದಿನಾಂಕ : 20–06–2018ರ ಪೂರ್ವಾಹ್ನ 10–00 ಘಂಟೆಗೆ ಹಾಜರಿರುವಂತೆ ಸೂಚಿಸಬೇಕೆಂದೂ ಹಾಗೂ ವಿಶ್ವವಿದ್ಯಾನಿಲಯದ ಕ್ರೀಡಾ ಕಾರ್ಯಕ್ರಮಕ್ಕೆ ತಮ್ಮ ಸಂಪೂರ್ಣ ಸಹಕಾರವನ್ನು ನೀಡಬೇಕೆಂದು ಕೋರುತ್ತೇನೆ.

**<u>ವಿಶೇಷ ಸೂಚನೆ</u>**

ಅ) ಸಭೆಯಲ್ಲಿ ಮಂಡಿಸಲು ವಿಶ್ವವಿದ್ಯಾನಿಲಯ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಪಟ್ಟ ಸಲಹೆ : ಸೂಚನೆಗಳೇನಾದರೂ ಇದ್ದಲ್ಲಿ ಅವುಗಳನ್ನು ದಿನಾಂಕ : 18–06–2018ರೊಳಗೆ ನಿರ್ದೇಶಕರು ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿಗೆ ತಲುಪಿಸತಕ್ಕದ್ದು.

ಆ) ಮಹಿಳೆಯರ/ಪುರುಷರ ಅಂತರ ವಲಯ ಕ್ರೀಡಾ ಸ್ಪರ್ಧೆಗಳು, ಅಥ್ಲೆಟಿಕ್ಸ್ ಕೂಟ ಮತ್ತು ಕ್ರಾಸ್‌ಕಂಟ್ರಿ ರೇಸ್‌ಗಳನ್ನು ನಡೆಸಲಿಚ್ಛಿಸುವ ಕಾಲೇಜುಗಳು ದಿನಾಂಕ : 18–06–2018ರೊಳಗೆ ತಮ್ಮ ಪ್ರಸ್ತಾಪನೆಗಳನ್ನು ನಿರ್ದೇಶಕರು ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿಗೆ ಕಳುಹಿಸಿಕೊಡಬೇಕು.

ತಮ್ಮ ವಿಶ್ವಾಸಿ

2/6/2018

ನಿರ್ದೇಶಕರು

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು - 570 005

ಪು.ತಿ.ನೋ.

**ಕಾರ್ಯ ಸೂಚಿ**

I ಬೆಳಿಗ್ಗೆ 10–10ಕ್ಕೆ ಟೀ

II ಬೆಳಿಗ್ಗೆ 10–30ಕ್ಕೆ ಸಭೆ ಸೇರುವುದು.

III ಸ್ವಾಗತ

IV ವಿವಿಧ ಕಾಲೇಜುಗಳು ಸಲ್ಲಿಸಿರುವ ಸಲಹೆ : ಸೂಚನೆಗಳ ಅನುಮೋದನೆ.

V ವಲಯ ಸಮಿತಿಗಳ ರಚನೆ.

VI 2018–2019ನೇ ಸಾಲಿನ ಅಂತರ ವಲಯ ಸ್ಪರ್ಧೆಗಳ ಮತ್ತು ವಿಶ್ವವಿದ್ಯಾನಿಲಯದ ತಂಡಗಳ ಆಯ್ಕೆಗಾಗಿ ಸ್ಥಳ ಹಾಗೂ ದಿನಾಂಕಗಳನ್ನು ಗೊತ್ತುಪಡಿಸುವುದು.

VII ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.

VIII ಅಧ್ಯಕ್ಷರ ಭಾಷಣ

IX ವಂದನಾರ್ಪಣೆ

2/6/2018

ನಿರ್ದೇಶಕರು

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು - 570 005

ಸಂಪಾದಕರು/ವರದಿಗಾರರು/ನಿರ್ದೇಶಕರು..................................ಪತ್ರಿಕೆ/ಮಾಧ್ಯಮ ಮೈಸೂರು ಇವರಿಗೆ ಪ್ರಕಟಣೆಯ ಕೃಪೆಗಾಗಿ

O.I.G.S. Book-Post

ಗೆ,

ಇಂದ,

ರವಾನೆ ಗುಮಾಸ್ತ
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಸ್ಪೋರ್ಟ್ಸ್ ಪೆವಿಲಿಯನ್
ಮೈಸೂರು–570 005

D/-2018-19 May-11 - No 22-23